# ‘ಐಎಎಸ್ ಪರೀಕ್ಷೆಗೆ ಮುನ್ನ ಹಿಂಜರಿಕೆ ಗೆಲ್ಲಿ...

◆ ಯುಪಿಎಸ್‌ಸಿ ಪರೀಕ್ಷೆ ಎದುರಿಸಬೇಕು ಎನ್ನುವವರು ಮೊದಲು ಏನು ಮಾಡಬೇಕು?

ಮೊದಲು ಗುರಿ ನಿಚ್ಚಳವಾಗಿರಬೇಕು. ಪ್ರತಿದಿನ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಓದಬೇಕು. ಕನ್ನಡದಲ್ಲಿ ‘ಪ್ರಜಾವಾಣಿ’ ಓದಬೇಕು. ರಾಷ್ಟ್ರೀಯ ವಿದ್ಯಮಾನಗಳ ಮಾಹಿತಿಯನ್ನು ತಿಳಿದುಕೊಳ್ಳಬೇಕು. ಎನ್‌ಸಿಇಆರ್‌ಟಿ ಪಠ್ಯ, ಸಾಮಾನ್ಯ ಅರ್ಥಶಾಸ್ತ್ರ, ನಮ್ಮ ಸಂವಿಧಾನ ಪುಸ್ತಕಗಳನ್ನು ಓದಿದರೆ ಪರೀಕ್ಷೆಯ ಬಗ್ಗೆ ಪ್ರಾಥಮಿಕ ಜ್ಞಾನ ಬರುತ್ತದೆ. ಹೈಸ್ಕೂಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಹೇಳಿಕೊಡುವ ವಿಷಯಗಳನ್ನೇ ಗಂಭೀರವಾಗಿ ಓದಬೇಕು. ಸಮಾಜ ವಿಜ್ಞಾನ, ವಿಜ್ಞಾನದ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು.

◆ ಪತ್ರಿಕೆಗಳ ಯಾವ ವಿಷಯಗಳು ಪರೀಕ್ಷೆಗೆ ಅನುಕೂಲ?

ಸರ್ಕಾರದ ಸಮೀಕ್ಷಾ ವರದಿಗಳು, ಶಬರಿಮಲೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪುಗಳು, ದೇಶದ ಅರ್ಥ ವ್ಯವಸ್ಥೆ, ಕೃಷಿ, ದೇಶದ ಮೇಲೆ ಪರಿಣಾಮ ಬೀರುವ ವಿಷಯಗಳ ಬಗ್ಗೆ ಇರುವ ಮಾಹಿತಿ ಅನುಕೂಲ. ಒಂದು ರಾಜ್ಯದ ವಿಷಯ ರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾದರೆ ಅದರ ಮೇಲೆ ನಿಗಾ ಇಡಬೇಕು. ಇದು ನೇರವಾಗಿ ಪರೀಕ್ಷೆಗೆ ಅನುಕೂಲವಾಗದೇ ಇದ್ದರೂ, ವಿಷಯದ ಮೂಲದ ಬಗ್ಗೆ ಸ್ಪಷ್ಟತೆ ಇಲ್ಲದೇ ಹೋದರೆ ನಿಖರ ಉತ್ತರ ಬರೆಯಲು ಸಾಧ್ಯವಾಗುವುದಿಲ್ಲ.

◆ ಪತ್ರಿಕೆಗಳ ಜೊತೆಗೆ ಬೇರೆ ಏನನ್ನು ಓದಬೇಕು?

ಅಂತರ್ಜಾಲ ಬಂದ ಬಳಿಕ ಅಂಗ್ಲೈಯಲ್ಲಿಯೇ ಸಾಕಷ್ಟು ಮಾಹಿತಿ ಸಿಗುತ್ತಿದೆ. ಐಎಎಸ್ ಅಧಿಕಾರಿಗಳು, ತರಬೇತಿ ಕೇಂದ್ರದ ಸಿಬ್ಬಂದಿ ಮತ್ತು ಅನುಭವಿಗಳು ಬರೆದಿರುವ ಲೇಖನಗಳು ಅಂತರ್ಜಾಲದಲ್ಲಿ ಲಭ್ಯ ಇವೆ. ‘ಕರ್ಮಯೋಗ’, ‘ಐ ಟು ಹರ್ಡ್ ಡ್ರೀಮ್’, ಶಿವಶಂಕರ ಮೆನನ್ ಅವರ ಪುಸ್ತಕಗಳು, ರಾಮಚಂದ್ರ ಗುಹಾ ಅವರ ‘ಇಂಡಿಯಾ ಆಫ್ಟರ್ ಗಾಂಧಿ’ – ಈ ರೀತಿಯ ಪುಸ್ತಕಗಳನ್ನು ಓದಬೇಕು. ಸಾಹಿತ್ಯದ ಪುಸ್ತಕಗಳನ್ನು ಓದುವ ಆಸಕ್ತಿಯಿದ್ದರೆ ಇನ್ನೂ ಒಳ್ಳೆಯದು.

◆ ಪರೀಕ್ಷೆ ಎದುರಿಸಲು ಯಾವಾಗಿನಿಂದ ಯೋಜನೆ ಇದ್ದರೆ ಒಳ್ಳೆಯದು?

ಪಿಯುಸಿಯಲ್ಲಿದ್ದಾಗಿನಿಂದಲೇ ನನಗೆ ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕು ಎನ್ನುವ ಆಸೆಯಿತ್ತು. ಪದವಿ ಹಂತಕ್ಕೆ ಬಂದಾಗ ಯುಪಿಎಸ್‌ಸಿ ಪರೀಕ್ಷೆ ಬಗ್ಗೆ ಸ್ಪಷ್ಟತೆ ಬಂತು. ಉತ್ತರ ಭಾರತದ ರಾಜ್ಯಗಳಿಗೆ ಹೋಲಿಸಿದರೆ ನಾವು ಗುರಿ–ನಿರ್ಧಾರ ಸ್ಪಷ್ಟಪಡಿಸಿಕೊಳ್ಳುವಲ್ಲಿ ಬಹಳಷ್ಟು ಹಿಂದಿದ್ದೇವೆ. ಆ ರಾಜ್ಯಗಳಲ್ಲಿ ಹೈಸ್ಕೂಲಿನಲ್ಲಿ ಓದುವಾಗಲೇ ವಿದ್ಯಾರ್ಥಿಗಳು ಸ್ಪಷ್ಟ ಗುರಿ ಇಟ್ಟುಕೊಂಡಿರುತ್ತಾರೆ.

◆ ಮುಖ್ಯ ಪರೀಕ್ಷೆಯ ವಿಷಯ ಆಯ್ಕೆ ಬಗ್ಗೆ ಪ್ರಾಥಮಿಕ ಪರೀಕ್ಷೆಗೂ ಮೊದಲೇ ಯೋಜನೆ ಇರಬೇಕೇ?

ಇದ್ದರೆ ಉತ್ತಮ. ಪದವಿಯಲ್ಲಿ ನಾವು ಓದಿದ ವಿಷಯಕ್ಕೆ ವಿರುದ್ಧವಾದ ವಿಷಯಗಳನ್ನು ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಲು ನನಗೆ ಆಸಕ್ತಿಯಿತ್ತು.



**2018ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ 17ನೇ ರ್‍ಯಾಂಕ್ ಪಡೆದಿರುವ ಹುಬ್ಬಳ್ಳಿಯ ರಾಹುಲ್ ಸಂಕನೂರ ಸತತ ಶ್ರಮದಿಂದ ಯಶಸ್ಸಿನ ಗುರಿ ಮುಟ್ಟಿದವರು. ‘ಹಳ್ಳಿಯಲ್ಲಿದ್ದುಕೊಂಡೇ ಯುಪಿಎಸ್‌ಸಿ ಪರೀಕ್ಷೆ ಮುಗಿಸಬಹುದು’ ಎನ್ನುವ ಅವರು – ಐಎಎಸ್ ಅಧಿಕಾರಿ ಆಗಬೇಕೆನ್ನುವ ಆಕಾಂಕ್ಷಿಗಳು ಹೊಂದಿರಬೇಕಾದ ಸ್ಪಷ್ಟ ಗುರಿ, ಭಾಷಾ ಪ್ರಭುತ್ವ, ಸತತ ಪ್ರಯತ್ನ ಮತ್ತು ಯಾವುದನ್ನು ಓದಬೇಕು ಎನ್ನುವ ಸಾಮಾನ್ಯ ಜ್ಞಾನದ ಕುರಿತು ‘ಸುಧಾ’ಗೆ ನೀಡಿರುವ ಸಂದರ್ಶನದಲ್ಲಿ ಮಾತನಾಡಿದ್ದಾರೆ.**

■ **ಪ್ರಮೋದ ಜಿ.ಕೆ.**

ಚಿತ್ರ: ಈರಪ್ಪ ನಾಯ್ಕರ